ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಶುಕ್ರವಾರ, ದಿನಾಂಕ 19ನೇ ಜುಲೈ, 2019

ಪೊಲೀಸ್ ಸಿಬ್ಬಂದಿಗಳಿಗೆ ರಾಘವೇಂದ್ರ ಔರಾದ್ಕರ್ ವರದಿಯ ಜಾರಿ ಕುರಿತು

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) -

ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) -

75 (573+574) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-(ಅ) ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ವೇತನ, ಭತ್ಯೆ ಪರಿಷ್ಕರಣೆ ಹಾಗೂ ಇನ್ನಿತರೆ ಸವಲತ್ತುಗಳ ಕುರಿತು ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿ ವರದಿ ಸರ್ಕಾರಕ್ಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಾದಲ್ಲಿ, ಸದರಿ ವರದಿಯಲ್ಲಿನ ಶಿಫಾರಸ್ಸಿನ ಮುಖ್ಯಾಂಶಗಳೇನು ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು)

(ಇ) ಸದರಿ ವರದಿಯನ್ನು ಇದುವರೆವಿಗೂ ಜಾರಿಗೊಳಿಸದಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ವರದಿಯನ್ನು/ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗುವುದು ; ವರದಿಯ ಜಾರಿಯ ಕುರಿತು ಸರ್ಕಾರದ ಸ್ಪಷ್ಟ ನಿಲುವೇನು ; ಸರ್ಕಾರ ಇಲ್ಲಿಯವರೆಗೂ ತೆಗೆದುಕೊಂಡ ಕ್ರಮಗಳೇನು ;

(ಈ) ರಾಜ್ಯದಲ್ಲಿ ಒಟ್ಟು ಇರುವ ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಹುದ್ದೆವಾರು ವಿವರ ನೀಡುವುದು) ಖಾಲಿ ಇರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಹುದ್ದೆವಾರು ಯಾವಾಗ ಭರ್ತಿ ಮಾಡಲಾಗುವುದು ;(ಉ) ಸದರಿ ಪೊಲೀಸ್/ಸಿಬ್ಬಂದಿಗಳಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು ; (ವಿವರ ನೀಡುವುದು)(ಊ) ವರದಿಯಲ್ಲಿ ನಿರೀಕ್ಷಿಸಬಹುದಾದ ಬಹು ಮುಖ್ಯ ಅಂಶಗಳೇನು ? (ವಿವರಗಳನ್ನು ಹಾಗೂ ವರದಿಯ ಪ್ರತಿಯನ್ನು ನೀಡುವುದು)